16. - ಗೋಸದಮ ಕೇಂದ್ರ, ಹುದುಗೂರು, ಸೋಮವಾರಪೇಟೆ ತಾ: -1

17. - ಪ್ರಾ.ಪ.ಚಿ ಕೇಂದ್ರ, ಗೋಣಿಮಾರೂರು, ಸೋಮವಾರ ಪೇಟೆ ತಾ: -1

18. - ಪ್ರ.ಗ್ರಾ.ಯೋ ಉ.ಕೇ. ತೋಳೂರುಶೆಟ್ಟಳ್ಳಿ, ಸೋಮವಾರಪೇಟೆ ತಾ: -1

ಒಟ್ಟು ಹುದ್ದೆಗಳು: - 15 ಒಟ್ಟು ಹುದ್ದೆಗಳು - 27

ಕೊಡಗು ಜಿಲ್ಲೆಯಲ್ಲಿನ ಕೈಗಾರಿಕೆಗಳು

91(500): ಶ್ರೀ ಅಪ್ಪಚ್ಚು ರಂಜನ್ ಎಂ.ಪಿ (ಸೋಮವಾರ ಪೇಟೆ) ಮಾನ್ಯ ಸಣ್ಣ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

ಅ. ಕೊಡಗು ಜಿಲ್ಲೆಯಲ್ಲಿರುವ ಸಣ್ಣ ಕೈಗಾರಿಕೆಗಳ ಸಂಖ್ಯೆ ಎಷ್ಟು? (ತಾಲ್ಲೂಕುವಾರು ವಿವರ ನೀಡುವುದು)

ಆ. ಇವುಗಳಿಗೆಲ್ಲಾ ಸರ್ಕಾರದ ಸಹಾಯಧನವನ್ನು ಮಂಜೂರು ಮಾಡಲಾಗಿದೆಯೇ: ಹಾಗಿದ್ದಲ್ಲಿ ಎಷ್ಟು ಕೈಗಾರಿಕೆಗಳಿಗೆ ಮಂಜೂರು ಮಾಡಲಾಗಿದೆ.

ಇ. ಸಹಾಯಧನ ಮಂಜೂರಾಗಿ ಬಿಡುಗಡೆಯಾಗದಿರುವ ಕೈಗಾರಿಕಾ ಘಟಕಗಳ ಸಂಖ್ಯೆ ಎಷ್ಟು?

ಈ. ಈ ಹಣವನ್ನು ಬಿಡುಗಡೆ ಮಾಡದಿರಲು ಕಾರಣಗಳೇನು?

ಉ. ಹಣ ಬಿಡುಗಡೆ ಮಾಡಲು ಯಾವ ಮಾನದಂಡವನ್ನು ಪರಿಗಣಿಲಾಗುತ್ತದೆ.

ಊ. ಈಗಾಗಲೇ ನೀಡಿರುವ ಸಾಹಯಧನದ ವಿವರಗಳೇನು?

ಶ್ರೀ ಆರ್. ರೋಷನ್ ಬೇಗ್ (ಸಣ್ಣ ಕೈಗಾರಿಕಾ ಸಚಿವರು)

ಅ. ಕೊಡಗು ಜಿಲ್ಲೆಯಲ್ಲಿ ದಿನಾಂಕ: 31.3.2002ರವರೆಗೆ ನೊಂದಾಯಿಸಿರುವ ಘಟಕಗಳ ತಾಲ್ಲೂಕುವಾರು ವಿವರಗಳು:

ಕ್ರ.ಸಂ.	ತಾಲ್ಲೂಕು	ನೊಂದಾಯಿತ ಘಟಕಗಳ ಸಂಖ್ಯೆ
1.	ಮಡಿಕೇರಿ	1083
2.	ಸೋಮವಾರಪೇಟೆ	1077
3.	ವಿರಾಜಪೇಟೆ	785
		2945

ಆ. ಎಲ್ಲಾ ಘಟಕಗಳಿಗೆ ಸಹಾಯಧನ ನೀಡಿಲ್ಲ ಅರ್ಹವಾದ 324 ಘಟಕಗಳಿಗೆ ರೂ. 555.06 ಲಕ್ಷ ಸಹಾಯಧನ ಮಂಜೂರು ಮಾಡಿದೆ.

ಇ. ದಿನಾಂಕ: 31.3.2002 ರವರೆಗೆ 130 ಘಟಕಗಳಿಗೆ ರೂ. 307.66 ಲಕ್ಷ ಬಿಡುಗಡೆಗೆ ಬಾಕಿ ಇದೆ.

ಈ. ಮಿತಿಗೊಳಿಸಿ ಆಯವ್ಯಯದಲ್ಲಿ ಹಣವನ್ನು ಒದಗಿಸಲಾಗಿದೆ.

ಉ. ಸಹಾಯಧನ ಮಂಜೂರಾತಿ ದಿನಾಂಕವನ್ನು ಆಧಾರವಾಗಿಟ್ಟುಕೊಂಡು ಜೇಷ್ಟತೆ ಆಧಾರದ ಮೇಲೆ ಸಹಾಯಧನವನ್ನು ಬಿಡುಗಡೆ ಮಾಡಲಾಗುತ್ತಿದೆ.

ಊ. ಕಳೆದ 3 ವರ್ಷಗಳಲ್ಲಿ ಬಿಡುಗಡೆಯಾದ ಹಣದ ವಿವಗಳು:

1999-2000	- 19 ಘಟಗಳಿಗೆ	- 38.85 ಲಕ್ಷಗಳು
2000-2001	- 30 ಘಟಕಗಳಿಗೆ	- 33.13 ಲಕ್ಷಗಳು
2001-2002	- 17 ಘಟಕಗಳಿಗೆ	- 18.89 ಲಕ್ಷಗಳು

ರಾಜ್ಯದಲ್ಲಿ ಮೀನುಗಾರರ ಅಭಿವೃದ್ಧಿಗಾಗಿ ಯೋಜನೆಗಳು

92(128): ಶ್ರೀ ಅರಗ ಜ್ಞಾನೇಂದ್ರ (ತೀರ್ಥಹಳ್ಳಿ) ಮಾನ್ಯ ಮೀನುಗಾರಿಕೆ ಮತ್ತು ಬಂದರು ರಾಜ್ಯ ಸಚಿವರುಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ. ರಾಜ್ಯ ಸರ್ಕಾರವು ಮೀನುಗಾರರ ಅಭಿವೃದ್ಧಿಗಾಗಿ ತೆಗೆದುಕೊಂಡಿರುವ ಯೋಜನೆಗಳೇನು?

ಆ. ಸದರಿ ಯೋಜನೆಗಳಿಂದ ಮೀನುಗಾರರಿಗೆ ಸಿಗುತ್ತಿರುವ ಸೌಲಭ್ಯಗಳೇನು. ಸರ್ಕಾರ ನೀಡುತ್ತಿರುವ ಹಣಕಾಸಿನ ನೆರವು ಎಷ್ಟು?

ಇ. ಮುರಾರಿ ಸಮಿತಿಯ ಶಿಫಾರಸ್ಸುಗಳನ್ನು ಕೇಂದ್ರ ಒಪ್ಪಿಕೊಂಡಿರುವಂತೆ ರಾಜ್ಯವು ಅನುಷ್ಠಾನಕ್ಕೆ ತರುವುದೇ?

ಈ. ಇವುಗಳನ್ನು ಕಾರ್ಯಾನುಚರಣೆಗೆ ತರಲು ಸರ್ಕಾರಕ್ಕಿರುವ ತೊಂದರೆಗಳೇನು?

ಉ. ಮೀನುಗಾರರ ಬೇಡಿಕೆಗಳೇನು? ಇವುಗಳ ಈಡೇರಿಕೆಗೆ ಸರ್ಕಾರ ಸ್ಪಂದಿಸಿದೆಯೇ?

ಊ. ಸಮುದ್ರ ಮೀನುಗಾರಿಕೆಯನ್ನು ಆ ಭಾಗದ ಸಂಪ್ರದಾಯಿಕ ಮೀನು ಕೃಷಿಕರಿಗೆ ನೀಡಬೇಕು, ವಿದೇಶಿ ಮೀನುಗಾರಿಕೆಗೆ ಅವಕಾಶ ನೀಡಬಾರದೆಂಬ ವಿಚಾರದ ಬಗ್ಗೆ ಸರ್ಕಾರದ ನಿಲುವೇನು?

ಶ್ರೀ ವಸಂತ್ ವಿ. ಸಾಲಿಯಾನ (ಮೀನುಗಾರಿಕೆ ಮತ್ತು ಬಂದರು ರಾಜ್ಯ ಸಚಿವರು)

ಅ. ಅನುಬಂಧ - 1ರಲ್ಲಿ ವಿವರಗಳನ್ನು ನೀಡಿದೆ.

ಆ. ಅನುಬಂಧ - 2ರಲ್ಲಿ ವಿವರಗಳನ್ನು ನೀಡಿದೆ.